ವಾರದ ಸಂಚಿಕೆ

Reg No. M 1299
Daily & Weekly

This Space is available for Advt.

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸಂಚಿಕೆ 303 [ಶನಿವಾರ 29—5—1943] 6 ಪೈ

Opera — Aryamala

ಅಪೆರಾ——

ಸಿನೇ ಅಮೋಘ ವಾರ

ಆರ್ಯಮಾಲ

ಪಿ. ಯು. ಚಿನ್ನಪ್ಪ. ಸಂತಾನಲಕ್ಷ್ಮಿ. ಟಿ. ಶಕುಂತಲ. ಕೃಷ್ಣಕ್, ಮಧುರಂ ಮುಂತಾದವರು ಪಾತ್ರವಹಿಸಿರುವರು

ವರ್ತಮಾನ

ಬೆಂಗಳೂರಿನಲ್ಲಿ ಹೋಟಲು ಇಟ್ಟಿರುವ ಜಿ ನಾಗಪ್ಪ ಎಂಬುವರಿಗೆ ತೆರಿಗೆ ದೋಸೆಬದಲು ಎಣ್ಣೆ ದೋಸೆ ಕೊಟ್ಟಿದ್ದಕ್ಕಾಗಿ 5ರೂಪಾಯಿ ಜುಲ್ಮಾನೆಯಾಯಿತು.

ಂ ಂ

ಚಿತ್ರದುರ್ಗ— ಇಲ್ಲಿಯ ಪುರಸ್ಕರೊಬ್ಬರು, ಚಿತ್ರದುರ್ಗದ ತ್ರಾಲ್ಲೋಕಿನ ಕೆಲವು ಹಳ್ಳಿಗಳನ್ನು ಇನ್ನಾಂಪುರ, ಮೊಗಲ್‌ಘರ್, ಫೌಜಿಪುರ, ಎಂದು ಕರೆಯಬೇಕೆಂದು ಒಂದು ನಿರ್ಣಯ ತುದಿರುತ್ತಾರೆ.

ಂ ಂ

ಜಿನಾರವರ ಉತ್ತರ — ಗಾಂಧೀಜಿ ಬರೆದ ಪತ್ರವನ್ನು ಭಾರತ ಸರಕಾರವು ತಡೆಗಟ್ಟಿದ್ದಕ್ಕೆ ಮಿ || ಜಿನ್ನಾರವರು " ಗಾಂಧೀಜಿಯವರು ಮುಸ್ಲಿಂ ಲೀಗನ್ನು ತೊಡಕಿನಲ್ಲಿ ಸಿಕ್ಕಿಸಲು ಯತಿಸಿರುತ್ತಾರೆ. ಲೀಗ್ ಬ್ರಿಟಿಷ್ ಸರಕಾರದೊಂದಿಗೆ ಜಗಳವಾಡುವಂತೆ ಮಾಡಿದ್ದಾರೆ ಆದರೆ ಗಾಂಧೀಜಿಯವರ ನೀತಿಯಾಗಲಿ, ಹೃದಯವಾಗಲೀ ಪರಿವರ್ತನೆಯಾಗಿಲ್ಲ ಮುಸ್ಲಿಂ ಲೀಗಿನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅವರು ಪ್ರಯತ್ನಮಾಡಿಲ್ಲ " ಎಂದು ಹೇಳಿರುವರು.

ವರ್ತಮಾನ

ಬನಾರ್ಸಾದಲ್ಲಿ ಜಪಾನೀಯರಿಂದು ಕಾನ್ಪಯಿ ವೇಲೆ ಬ್ರಿಟಿಷ್ ವಿಮಾನಗಳು ಧಾಳಿ ಮಾಡಿ 100 ಬೋಂಬಿಗಳನ್ನು ಮುಳುಗಿಸಿದವು.

ಂ ವ

ಶಾಸನಸಭಾ ಸದಸ್ಯರೊಬ್ಬರ ತಲಬನ್ನು ಚಫ್ತಿಮಾಡಲು ಲಾಹೋರು ಹೈ ಕೋರ್ಟಿನಲ್ಲಿ ದಾವಾ ಹೂಡಲಾಗಿತ್ತು. ಸದಸ್ಯರು ಸರಕಾರಿ ನೌಕರರಲ್ಲವೆಂದೂ ಅವರ ತಲಬನ್ನು ಜಫ್ತಿಮಾಡಲಾಗುವುದಿಲ್ಲವೆಂದೂ ತೀರ್ಮಾನವಿತ್ತರು.

ಂ ಂ

ಬೊಂಬಾಯಿನಲ್ಲಿ ಒಂದು ಸಪ್ತಾಹದಲ್ಲಿ 50 ವರಿದಿಗಿಂತ ಹೆಚ್ಚಾಗಿ ಊಟಕ್ಕೆ ಕರೆದಿದ್ದರೆಂದು ನಾಲ್ಕು ಜನರ ಮೇಲೆ ಸರ್ಕಾರದವರು ದಾವಾ ಹೂಡಿರುತ್ತಾರೆ. ಇದರಲ್ಲಿ ಅಡಿಗೆಮಾಡಿದವರೂ ಊಟಕ್ಕೆ ಬಡಿಸಿದವರೂ ಸೇರಿರುವರು.

ಂ

ಲಂಡನ್ನಿನಲ್ಲಿ ಅಂತರಾಷ್ಟ್ರೀಯ ಸಂಸ್ಥೆಯು ಸ್ಥಾಪನೆಯಾಗಿದೆ. ಇದರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ತೀರ್ಮಾನವಾಯಿತು.

ವರ್ತಮಾನ

ಡಚ್ ತೀರದಲ್ಲಿ ಒಂದು ನೌಕಾ ಯುದ್ಧವಾಗಿ ಒಂದು ಶತ್ರು ನೌಕೆ ಮುಳುಗಿತು.

ಂ ಂ

ಲಂಡನ್ ಪಾರ್ಲಿಮೆಂಟಿನಲ್ಲಿ ಮಿ || ಅಮೆರಿಯವರು, ಜಪಾನ್ ಬಗ್ಗೆ ಸಹಾನುಭೂತಿಯಿಲ್ಲ, ಗಾಂಧೀಜಿ ವಿಚಾರಣೆಗೆ ಗುರಿಪಡಿಸುವುದಿಲ್ಲ ಎಂದು ಹೇಳಿದರು.

ಂ ಂ

ವಾಷಿಂಗ್ಟನ್ನಿನ ಸಂಧಾನ ಮುಕ್ತಾಯವಾಯಿತು. ಇದು ಮಾತಿನ ಸಮಯವಲ್ಲ, ಕಾರ್ಯಸಾಧನೆ ನಡೆಸಬೇಕು, ಎಂದು ತೀರ್ಮಾನವಾಯಿತು. ಮಿ || ಚರ್ಚಿಲ್‌ರೂ ಮಿ || ರೂಸ್ವೆಲ್ಟರೂ 14 ದಿನಗಳ ಕಾಲ ಸಂಧಾನ ಮಾತನಾಡುತ್ತಿದ್ದರು.

ಂ ಂ

ಮಧ್ಯ ಸಾಮ್ರಾಜ್ಯಕ್ಕೆ ಭಾರತದಿಂದ ಹೋಗಿದ್ದ 6 ಮಂದಿ ಸದಸ್ಯರ ಪೈಕಿ 6 ಮಂದಿ ಸದಸ್ಯರು ಬೊಂಬಾಯಿಗೆ ವಾಪಸ್ ಬಂದರು.

ಂ ಂ

ಮಿ || ಜೋಸೆಫ್ ದೇವಿಸರವರು ಮಿ || ಸ್ಟಾರ್ಲಿರವರ ಉತ್ತರವನ್ನು ತೆಗೆದುಕೊಂಡು ಅಮೇರಿಕಾಕ್ಕೆ ಹೊರಟರು. ಆ ಉತ್ತರದಲ್ಲಿ ವಿಸಿದೆ ಎಂಬುದು ಸತ್ಯ ಒಡೆದಾಗ ಮಾತ್ರ ಮಿ || ರೂಸ್ವೆಲ್ಟರಿಗೆ ಗೊತ್ತಾಗುವುದೆಂದು ಹೇಳಿದರು.

ಂ ಂ

ಮಧ್ಯ ಪ್ರಾಚ್ಯಕ್ಕೆ ಪೋಲೆಂಡಿನ ಪ್ರಧಾನರೂ ಸೈನ್ಯಾಧಿಕಾರಿಯೂ ಆದ ಜನರಲ್ ನಿಕೋಸ್ಕಿಯವರು ಒಂದು ಪೋಲಿಷ್ ಸೈನ್ಯವನ್ನು ಪರೀಕ್ಷಿಸಲುಕ್ಕೆರೋ ಎಗೆ ಒಂದಿರುತ್ತಾರೆ.

ವರ್ತಮಾನ

ರಷ್ಯಾದ ಕ್ಯೂಬನ್ನಿನಲ್ಲಿ ಶತ್ರುಗಳು ಪಲಾಯನಸರಾಗತ್ತಿರುವರು. ನೊವೊರಸಿಸ್ಕ್ ಈಶಾನ್ಯದಲ್ಲಿ ಯುದ್ಧ ವ್ಯಾಪಾರ ಭವಾಗಿದೆ. ಕ್ಯೂಬನ್ನಿನಲ್ಲಿ 64 ಶತ್ರುಗಳ ವಿಮಾನಗಳು ನಾಶವಾಗಿವೆ.

ಂ ಂ

ಮೆಡಿಟರೇನಿಯನ್ನಿನಲ್ಲಿ ಈಗ ನೌಕೆಗಳು ಸಂಚಾರವಾಗಿ ಓಡಾಡಲು ಮಿತ್ರ ಪಕ್ಷದವರಿಗೆ ಅನುಕೂಲವಾದ್ದರಿಂದ ಅಮೇರಿಕಾದಿಂದ ರಫ್ತು ಮಾಡುವ ಪದಾರ್ಥದ ರವಾನೆದರೆ ಭಾರತಕ್ಕೆ ಬಂದೂ ಪರಿಯಷ್ಟು ಈಜಿಪ್ಟಿಗೆ ಎರಡೂವರೆಯಷ್ಟು ಕಪ್ಪು ಮಾಡಿದಾರೆ. ಈಗ ಜಾರಿಯಲ್ಲಿದ್ದದ್ದು ಶೇಕಡ 15 ರಷ್ಟು ದರ.

ಂ ಂ

ಸಂಯುಕ್ತ ಸ್ವಾಮ್ಯದಲ್ಲಿ ಬಟ್ಟೆ ಮತ್ತು ನೂಲಿನ್ನು ಹತೋಟಿಯಲ್ಲಿಟ್ಟು ಕೊಳ್ಳುವುದಾಗಿ ಸರ್ಕಾರದವರು ತಿಳಿಸಿರುವರು.

ಂ ಂ

ತಮ್ಮ ದೇಶವನ್ನು ಕಾಪಾಡಿಕೊಳ್ಳಲು ಇಟಲಿಯವರು 1 ಲಕ್ಷ ಮೈನುಗಳನ್ನು ತಮ್ಮ ದೇಶದ ಸುತ್ತಲೂ ಹಾಕಿಕೊಂಡಿರುವರು

ಂ ಂ

ಬೊಂಬಾಯಿಗೆ 3900 ಮೈಲಿಯಲ್ಲಿ ಭೂಕಾಸವಾದಹಾಗೆ ಕೊಲಾಬಾ ಅಬ್ಸರ್ವೇಟರಿಯು ತಿಳಿಸುತ್ತಿದೆ. ಇದರಿಂದ ಬೆಪಾಸಿನಲ್ಲಿ ಏಗರಬಹುದೆಂದು ಊಹಿಸಿಲಾಗಿದೆ.

ಸೂಚನೆ— ನಾಳೆಯ ದಿನ ಪತ್ರಿಕೆಯು ಪ್ರಕಟಿಸುವುದಿಲ್ಲ

ಶ್ರೀ 'ಓಂ' ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಕೇಸರವಾದ ಪದಾರ್ಥವೂ ಸೇರಿಲ್ಲ ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಈ ವಾರದ ಕಥೆ—

ಸ್ವಯಂಕೃತಾಪರಾಧ

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದದ್ದು)

ನಾನು ಹೈ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಹೊಟೆಲ್ ಖರ್ಚು ಸ್ಟೇಷನರಿ ಸಾಮಾನುಗಳ ಖರ್ಚು, ಪಾಸೀಯ ವಸ್ತುಗಳ ಖರ್ಚು, ಇವೆಲ್ಲಾ ಸೇರಿ 3 ಸಾವಿರ ರೂಪಾಯಿಗಳವರೆಗೆ ಖರ್ಚಾಯಿತು. ಇಷ್ಟು ಹೆಚ್ಚಾಗಿ ಹಣ ಸ್ಖರ್ಚಾದಲ್ಲಿ ದೇಹಶ್ರಮ ಬಿದ್ದು, ಪೆಟ್ರಿಕ್ಯುಲೇಷನ್ ಮಾಡಿದ್ದಾಯಿತು. ಇದಕ್ಕಾಗಿ ಆಸ್ತಿಗಳೆಲ್ಲಾ ಅಡವಾಗಿ. ಆದರೂ 20 ರೂಪಾಯಿಗೆ ಮೇಲ್ಪಟ್ಟ ಸಂಪಾದನೆ ಯಿಲ್ಲ. ಈ 3 ಸಾವಿರ ರೂಪಾಯಿಗಳನ್ನು ಒಡವಾಳವಾಗಿಟ್ಟ ವ್ಯಾಪಾರ ಮಾಡಿದ್ದರೆ ಎಷ್ಟೋ ಚೆನ್ನಾಗಿತು.

ಆದದ್ದಾಯಿತು. ಬರೀ ಯೋಚನೆಯಿಂದ ಫಲವಿಲ್ಲ. ಆಪದ್ಧನವಾಗಿ ಬಹು ಶ್ರಮಯಿಂದ ಉಳಿಸಿಕೊಂಡಿರುವ 20 ರೂಪಾಯಿಗಳನ್ನ ಖರ್ಚಿಗೆ ತೆಗೆದು ಕೊಂಡು ಹೆಂಡತಿಯನ್ನು ಕರೆತರುವ ಒಗ್ಗೆ ಪ್ರಯಾಣವಾಡಲೇಬೇಕು. ಕಾಳ ಕಪ್ಪು, ಮಚ್ಚೆ ಮುಖ, ಹಳ್ಳಿಗಾಡಿನ ಹೆಣ್ಣು ಎಂದು ಮುಂತಾದ ದುರ್ಭಾವನೆಗಳನ್ನು ದೂರಮಾಡಿ, ಅವರಿವರು ಅಡಿಕೊಳ್ಳುವದಕ್ಕೆ ಅವಕಾಶವಾಗದಂತೆ ಸಂಸಾರ ಮಾಡಿಕೊಂಡಿರಬೇಕು. ಬಂದು ನೋಳೆ ನೇತ್ರ ದೋಷವು ಬಯಲಾಗಿ ಸಂಕಾದ ಕೆಲಸಕ್ಕೆ ಕುಂದಕ ಒಂದರೂ ಬಂದಿಹುದು. ಆದರೇನು, ಅವರಿವರಿಗೆ ಖಾತ ಹೇಳಿ ಯಾದರೂ ಜೀವನಕ್ಕೆ ಸಂಪಾದಿಸಿಕೊಳ್ಳಬಹುದು (ಎಂದು ಮುಂತಾಗಿ ಯೋಚಿಸಿ ರಜಾ ಅಪ್ಲಿಕೇಷನ್ ಒರೆದು ಕಛೇರಿಗೆ ರವಾನಿಸಿದನು. ನಂತರ ತಾಯಿಯ ಹತ್ತಿರಕ್ಕೆ ಬಂದು. ಅಮ್ಮಾ, ಇವತ್ತು ನಿನ್ನ ಸೊಸೆಯನ್ನು ಕರೆತರುವ ಒಗ್ಗೆ ಪ್ರಯಾಣ ಮಾಡುತ್ತೇನೆ, ಎನ್ನುತ್ತಲೇ ಸುಬ್ಬಮ್ಮನು ಇದನ್ನು ಕೇಳಿ ಸಂತೋಷ ಗೊಂಡಳಾಗಿ, ಹೀಗೆ ಹೇಳಿದಳು—

ಸುಬ್ಬಮ್ಮ — ಕಮಲಿಯೇ ಬರುತ್ತಾಳೆಯೇ, ಬಹಳ ಸಂತೋಷ. ಬೇಗ ಕರೆದುಕೊಂಡು ಬಾರಪ್ಪಾ. ನಮ್ಮ ಕಮಲಿ ಇದ್ದಾಗ ಈ ಬೃಂದಾವನದ ಸತ್ಯ ಲೂ ದಶಾವತಾರದ ರಂಗಗಳು, ಎಷ್ಟು ಹಸೆಗಳು. ಬೃಂದಾವನಕ್ಕೆ ಎಷ್ಟು ಅಂ ಕಾರ. ತುಳಸೀ ಪೂಜೆ, ದೇವರ ತೀರ್ಥ ಇವೆರಡೂ ಇಲ್ಲದೆ ಊಟ ಮಾಡುತ್ತಿದ್ದಳೇ ಅವಳು ಎಷ್ಟು ಮಡಿ ಎಷ್ಟು ಆಚಾರ. ಸಾಯಂಕಾಲದ ವೇಳೆಯು ಲ್ಲಂತೂ ಎಷ್ಟು ಬೃಂದಾವನದ ಅಲಂಕಾರ. ಎಷ್ಟು ಪ್ರದಕ್ಷಣೆ, ನಮಸ್ಕಾರ ನಮ್ಮ ಕಮಲಿಯು ಜಾಣತನವನ್ನು ಅರಿಗಾದರೂ ಉಂಟೆ. ಆಹಾಹೇಹಾಹು ಸಾಕು. ಒಂದು ದಿನ ಒಂದು ಕ್ಷಣವಾಗಿ ಕಳೆಯುತ್ತಿತ್ತು. ಮಾತೆತ್ತಿದರೆ, ಅತ್ತಮ್ಮಾ ನಿಮಗೆ ವಯಸ್ಸಾಯಿತು, ಕಷ್ಟಪಡಬೇಡಿ, ಎಲ್ಲಾದಕ್ಕೂ ನಾನಿದ್ದೇನೆ, ಎಂದು ಪ್ರತಿಯೊಂದು ಕೆಲಸವನ್ನೂ ತಾನೇ ಮಾಡಿಕೊಂಡು ಹೋಗುತ್ತಿದ್ದಳು. ಕಣ್ಣು ಮುಚ್ಚಿದರೆ ಕಮಲಿಯೇ ಕಾಣುತ್ತಿದ್ದಾಳೆ, ಎಂದು ಹೇಳಿ, ಮಗೂ ಇದೋ ಎದ್ದ ಬೇಗಬೇಗ ಅಡಿಗೆ ಮಾಡುತ್ತೇನೆ, ಮೊದಲು ಕಮಲಿಯನ್ನು ಕರೆದುಕೊಂಡು ಬಾರಪ್ಪಾ, ಎನ್ನುತ್ತಾ, ಸ್ನಾನಮಾಡಿ, ಅಡಿಗ ಮಾಡಿ, ಮೂರ್ತಿಗೆ ಒಡಿಸಿ, ಮಗೂ ಬೇಗ ಹೊರಡು. ದೂರ ಪ್ರಯಾಣ. ಕಡೆಪೂಡಬೇಡ, ಸಾಯಂಕಾಲದ ಒಳಗಾಗಿ ಮಾವನವರ ಮನೆಯನ್ನು ಸೇರುವ ಪ್ರಯತ್ನ ಮಾಡು, ಎಂದು ತಿಳಿಸುತ್ತಲೇ ನಾರಾಯಣ ಮೂರ್ತಿ ಪ್ರಯಾಣ ಮಾಡಿದನು.

(ಮುಂದುವರಿಯುವುದು)

ಲಂಡನ್, ಮೇ 24 ನಿನ್ನೆ ಶತ್ರು ಸ್ವಾಸ್ಥ್ಯದಮೇಲೆ ಆರ್. ಎ. ಎಫ್. ನವರು ಭಾರಿ ಧಾಳಿ ನಡೆಸಿದರು. ರುಹರ್‌ದಲ್ಲಿನ ಉತ್ತಮ ರಕ್ಷಣಾ ವ್ಯವಸ್ಥೆಗಳು ಮೂಲೋತ್ಪಾಟಣ ಮಾಡಲಾಯಿತು. 2000 ಟನ್ ಮೇಲ್ಪಟ್ಟು ಬಾಂಬು ಸುರಿಮಳೆ ನಡೆಸಲಾಯಿತು. ಶತ್ರುಗಳ 28 ವಿಮಾನಗಳು ಕಾಣೆಯಾಗಿದೆ. ಶತ್ರುಗಳಿಗೆ ತುಂಬಾ ನಷ್ಟ ಉಂಟುಮಾಡಲಾಗಿದೆ. ಡಾರ್‌ಮಾಂಡಿನ ಧಾಳಿಯಲ್ಲಿ ಮಿತ್ರ ಮಂಡಲಿಯ 500 ವಿಮಾನಗಳಿದ್ದವು. ಇಲ್ಲಿಯವರೆಗೆ ಜರ್ಮನಿಯ ಮೇಲೆ ಹಾಕಿರುವ ಬಾಂಬುಗಳು 1 ಲಕ್ಷ ಟನ್ ಮೇಲ್ಪಟ್ಟು ಬಾಂಬುಗಳು ಸುರಿಯಲಾಗಿದೆ.

ವರ್ತಮಾನ

ಬವೇರಿಯ ಉತ್ತರ ಭಾಗದಲ್ಲಿರುವವರೂ ಬ್ರಿಟಿಷ್ ವಿಮಾನಧಾಳಿಗೆ ಹೆದರಿ ಅಪ್ಯಾಂತ್ಯಗಳನ್ನು ಬಿಡುತ್ತಿರುವರು.

ಬ್ರಿಟಿಷರಿಗೂ ರಷ್ಯದವರಿಗೂ ಸ್ನೇಹ ಬೆಳೆದ ದಿವಸವಾದ್ದರಿಂದ ನಿನ್ನೆ ಇಂಗ್ಲೆಂಡಿನಲ್ಲಿ ರಷ್ಯಾ ದಿವಸವು ಬಹು ವಿಜೃಂಭಣೆಯಿಂದ ಜರುಗಿತು.

ಬೊಂಬಾಯಿ ಪ್ರಾಂತ್ಯದಲ್ಲಿ ಯಾವ ಎಣ್ಣೇ ಬೀಜದ ಹಿಂಡಿಯನ್ನು ಸೌದೆಯಾಗಿ ಉಪಯೋಗಿಸ ವುದನ್ನು ಸರ್ಕಾರದವರು ಪ್ರತಿಬಂಧಿಸಿದ್ದಾರೆ.

ಯುದ್ಧ ಮುಗಿವನಂತರ ಕರಾಚಿ ಡೇಲಿ ಗೆಜಿಟ್ ಸಂಪಾದಕರಾದ ಮಿ॥ ಶರ್ಮರು ಭಾರತದ ವಿಷಯವಾಗಿ 3 ಗ್ರಂಥಗಳನ್ನು ಬರೆದು ಅಮೇರಿಕಾದ ಒಂದು ಪ್ರಕಟಣಾ ಸಂಸ್ಥೆಗೆ ಕೊಡುವರೆಂದು ಗೊತ್ತಾಗಿದೆ.

ಇಟಲಿಯಲ್ಲಿ ಕಚ್ಚಾಪದಾರ್ಥಗಳು ಇಲ್ಲವಾವ್ದರಿಂದ ಯುದ್ಧೋದ್ಯಮದ ಸಾಮಗ್ರಿಗಳ ತಯಾರಿಕೆಯು ಕಡಮೆಯಾಗಿದೆ.

ಮಿ॥ ಜೋಸೆಫ್ ಡೇವಿಸ್‌ರವರು ಮುಂದಿನ ಜನಾಂಗಕ್ಕೆ ಸ್ಟಾಲಿಯನ್ ಗ್ರಾಡ್ ಚರಿತ್ರೆ ತಿಳಿಯಲು, ಅದನ್ನು ಈಗಿರುವ ಹಾಗೆ ಬಿಡಬೇಕೆಂದುದು 5 ಮೈಲಿ ದೂರದಲ್ಲಿ ಹೊಸ ಪಟ್ಟಣವನ್ನು ಕಟ್ಟಬೇಕೆಂದು ಸಲಹೆ ಮಾಡಿರುವರು.

ಇಟಲಿಯು ಹೊರೆಗಿದ್ದ ತನ್ನ ಸೇನೆಯನ್ನೆಲ್ಲಾ ಸ್ವದೇಶವನ್ನು ಕಾಪಾಡಿಕೊಳ್ಳಲು ಹಿಂದಕ್ಕೆ ಕರೆಸಿಕೊಂಡಿದೆ. ಜರ್ಮನಿಯು ಹೆಚ್ಚಾಗಿ ವಿಮಾನ ಕಳುಹಿಸಬೇಕೆಂದು ಗಲಾಟೆ ಮಾಡುತ್ತಿದೆ. ಜರ್ಮನಿ ಸೇನೆಯು ಈಗ ಸಾರ್ಡಿನಿಯಾಕ್ಕೆ ಬಂದಿದೆ.

ಚೆಕೊಗಾಲವಿಕಿಯಲ್ಲಿ ಬರ್ಮಾ ಮೇಲೆ ದಂಡಯಾತ್ರೆ ನಡೆಯಲು ಸಿದ್ಧತೆ ನಡೆಯುತ್ತಿದೆ.

ಜನರಲ್ ಡಿಗಾಲರಿಗೂ, ಅಂಥೋಣಿ ಈಡನ್ನರಿಗೂ ಭೇಟಿಯೂ ಮಾತುಕತೆಯೂ ನಡೆಯಿತು.

ಅಮೇರಿಕಾದಲ್ಲಿ ರೈಲ್ವೆ ಕೂಲಿಗಾರರಿಗೆ ಗಂಟೆಗೆ 8 ಸೆಂಟಿನಂತೆ ಸಂಬಳ ಹೆಚ್ಚಿಸಿ ನೂಡಿರುದ್ದಾರೆ

ವರ್ತಮಾನ

ಶ್ರೀ ವಿ. ಡಿ. ಸವಾರ್ಕರವರು ತಮ್ಮ 61 ನೇ ವರ್ಧಂತ್ಯುತ್ಸವಕ್ಕಾಗಿ ಪೂನಾಕ್ಕೆ ಬಂದಿರುತ್ತಾರೆ. ಇವರನ್ನು ಸ್ಟೇಷನ್ನಿನಲ್ಲಿ ಎದುರುಗೊಳ್ಳಲು ಲಕ್ಷಾಂತರ ಜನರು ಬಂದಿದ್ದರು. ಇವರಿಗೆ ಅಲ್ಲಿನ ಮಹಾಜನರು 2 ಲಕ್ಷ ರೂಪಾಯನ್ನು ಕೊಡುತ್ತಾರೆ. ಬೊಂಬಾಯಿನಲ್ಲಿ 61 ಸಾವಿರ ಕೊಡುವುದಕ್ಕೆ ಈಗಾಗಲೇ 42500 ರೂಪಾಯಿ ವಸೂಲಾಗಿದೆ

ಂ ಂ

ಸೆಪ್ಟಂಬರ್ ಅಂತ್ಯದೊಳಗಾಗಿ ಜಪಾನರು ಚೀನೀಯರ ಸಂಗಡ ಶಾಜಿಯನ್ನು ಮಾಡಿಕೊಳ್ಳುತ್ತಾರೆಂದು ಕೋರಿಯರ್ ಮುಖ್ಯಸ್ಥನೊಬ್ಬನು ಅಮೇರಿಕಾದಲ್ಲಿ ಹೇಳಿರುವನು.

ಂ ಂ

ಈಗಿನ ಒಟ್ಟಿ ಅಭಾವವನ್ನ ನಿವಾರಣೆಗಾಗಿ ಪಂಡಿತ ಮದನಮೋಹನ ಮಾಳವರವರು ಖಾದಿಯನ್ನು ಜನರು ಕೊಳ್ಳಲು ಭಾರತದಲ್ಲೇ ಒಂದು ದೊಡ್ಡ ಪ್ರಯತ್ನ ನಡೆಸಲು ನಿರಂತರವಾಗಿ ಖಾದಿ ಮುಖಂಡರ ಸಂಗಡ ಪತ್ರನಡೆಸುತ್ತಿದ್ದಾರೆ.

ಂ ಂ

ಅಮೇರಿಕಾದ ರಬ್ಬರ್ ಕಂಪೆನಿಯಲ್ಲಿ ಕೆಲಸಕ್ಕೆ ಹೋಗಲೇಬೇಕೆಂದು ಮಿ॥ ರೂಸ್‌ವೆಲ್ಟರು ಆಜ್ಞೆಮಾಡಿರುತ್ತಾರೆ

ಂ ಂ

ಯುಗೊಸ್ಲೇವಿಯಾದಲ್ಲಿ ದೇಶಭಕ್ತರಿಗೂ ಜರ್ಮನ್ ಸೇನೆಗಳಿಗೂ ಬೀದಿಬೀದಿಗಳಲ್ಲಿ ಕದನವಾಗುತ್ತಿದೆ.

ಂ ಂ

ಮಿ॥ ಗಳಾದ ಸ್ಟಾಲಿನ್, ಚರ್ಚಿಲ್ ರೂಸ್‌ವೆಲ್ಟ್, ಚಿಯಂಗ್‌ಕೈಷೇಕ್, ಈ ನಾಲ್ವರೂ ಒಂದು ಕಡೆ ಸೇರಿ ಮಾತಿನಾಡಬೇಕೆಂದಿರುವರಷ್ಟೆ. ಇದಕ್ಕೆ ಸ್ಟಾಲಿನ್‌ರು ಆಲಾಸ್ಕಾ ಅಥವಾ ಸೈಬೀರಿಯಾವನ್ನು ಸೂಚಿಸಿರುವರು.

ಂ ಂ

ವಾಂಷಿಂಗ್‌ಟನ್‌ನಲ್ಲಿ ಭಾವಿಯೊಳಗಿದ್ದ ಕಾಂಗ್ರೆಸ್ ಆಫೀಸನ್ನು ಶೋಧನೆಮಾಡಿದರು. ಅಲ್ಲಿಂದ ರವಾನೆಮಾಡಲು ಸಿದವಾಗಿದ್ದ ಹಸ್ತಪತ್ರಿಕೆಗಳು, ಆಫೀಸ ಕಾಗದಪತ್ರಗಳೂ ಎಲ್ಲಾ ಸಿಕ್ಕಿತು. ಅಲ್ಲಿದ್ದ ಇಬ್ಬರು ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿರುವರು.

ಂ ಂ

ಋಣಬನ್ನು ರಫ್ತು ಮಾಡಲು ಅವಶ್ಯಕತ ವಿಲ್ಲದೇ ಇರುವುದರಿಂದ, ವ್ಯಾಪಾರವಿಲ್ಲದೆ ಒಂಗಾಳದಲ್ಲಿ ಸೆಣಬುಬೆಳೆಯುವವರಿಗೆ ತುಂಬಾ ನಷ್ಟವಾಗಿದೆ. ಇನ್ನುಮೇಲೆ ಇದರಿಂದ ಹಗ್ಗ, ಜೋಡು, ಕಂಬಳಿ ಒಟ್ಟಿ ಮಾಡಿ ಮಾರುವ ಯೋಚನೆಯಲ್ಲಿದ್ದಾರೆ.

ಜರ್ಮನ್ ಶಕ್ತಿ ....

ಸ್ವೀಡನ್ನಿನಲ್ಲಿ ಮಾತುಕತೆ

ಅನೇಕರು ಪ್ರಸಿದ್ಧ ವೃತ್ತಕಾರನು ಈಗ ಸ್ವೀಡನ್ನಿಂದ ಈ ಪ್ರಕಾರ ಅಮೇರಿಕಕ್ಕೆ ತಂತಿಕಳಿಸಿರುವನು —" ನಾನು ಒಂದು ಔತಣದಲ್ಲಿ ಭಾಗಿಯಾಗಿದ್ದೆ ಸ್ವೀಡನಲ್ಲಿ ಮಿಲಟರಿ ಉದ್ಯೋಗದಲ್ಲಿದ್ದ ಒಬ್ಬ ದೊಡ್ಡ ಅಧಿಕಾರಿಯೂ, ಇನ್ನೊಬ್ಬ ಬ್ಯಾಂಕಿನ ಅಧಿಕಾರಿಯೂ ಜರ್ಮನಿಯು ಇನ್ನೊಂದು ವರ್ಷಕ್ಕಿಂತ ಹೆಚ್ಚಾಗಿ ಯುದ್ಧಮಾಡಲಾರದೆಂದರು ಇವರಲ್ಲದೆ ಇನ್ನೂ ಇತರ ದೊಡ್ಡವರನ್ನು ಸುಮಾರು 12 ಮಂದಿಯರ ಸಂಗಡ ಮಾತನಾಡಿದೆ. ಎಲ್ಲರೂ ಒಂದು ವರ್ಷದಲ್ಲಿ ಜರ್ಮನಿ ಪೂರ್ತಿ ಸೋಲಿನಿಂದ ಸ್ಕರಿಸುವದು ಎಂದರು ಒಬ್ಬ ಸ್ವೀಡ ಮುಖ್ಯಸ್ಥನು ಪದೇ ಪದೇ ಜರ್ಮನಿಗೆ ಹೋಗುತ್ತಿರುವನು. ಅವನಿಗೆ ಅಲ್ಲಿನ ಅನುಭವ ಹೆಚ್ಚು. ಅವನು ಹಿಟ್ಲರ್, ಹಿಮ್ಲರ್ ವಂಶ್ಯ ಜನರುಗಳ ಅನುಯಾಯಿಗಳಿಗೆ ನಂಬಿಕೆಯಿದ್ದರೂ, ಜರ್ಮನಿ ಪ್ರಜೆಗಳಿಗೆ ಯುದ್ಧಗೆಲ್ಲುವ ನಂಬಿಕೆಯಿಲ್ಲವೆಂದನು ಬ್ಬ ಜರ್ಮನ್ ಬಂಡವಾಳಗಾರನು ನಾಜಿಗಳು ಗೆಲ್ಲುವ ಸಂಭವವಿಲ್ಲವೆಂ ಹೇಳಿದನು ".

——

ಟರ್ಕಿಯಲ್ಲಿ ಸ್ತ್ರೀ ಸೈನ್ಯವು

ಈಗ ಟರ್ಕಿಯು ಯುದ್ಧದಲ್ಲಿ ಇಳಿದ ಜನಾಂಗಗಳಿಂದ ಅವರಿಸಲ್ಪಟ್ಟಿರುವುದರಿಂದ ಅಲ್ಲಿ ಯುದ್ಧದ ಉದ್ಯೋಗವನ್ನು ಸಹಳ ಜೋರಾಗಿ ನಡೆಸಲ್ಪಟ್ಟಿದೆ. ಯಾ ಲಿಂಗಭೇದವಿಲ್ಲ. 15 ರಿಂದ 45 ವರ್ಷ ವಯಸ್ಸಿನವರೆಲ್ಲರಿಗೂ ಸ್ತ್ರೀಯರಿಗೂ ಪುರುಷರಂತೆಯೂ ಸಮನಾಗಿ ಬಲಾತ್ಕಾರವಾಗಿ ಸೈನಿಕ ಶಿಕ್ಷಣವು ಕೊಡಲ್ಪಡುತ್ತಿರುವುದು. ಸ್ತ್ರೀದಳಕ್ಕೆ " ಬ್ಲೂ ಅಮೆಜಾನ್ " ದಳವೆಂದು ಹೆಸರು. ಯುದ್ಧ ವಿಮಾನಗಳನ್ನು ಹಾರಿಸುವುದು ಕೊಡೆಗಳಿಂದ ಕೆಳಕ್ಕೆ ಧುಮುಕುವುದು. ಜಾಂಬಜೆ ಮತ್ತು ಫೈಟರುಗಳನ್ನು ನಡೆಸುವ ಶಿಕ್ಷಣವು ರಷ್ಯನ್ನರು ತುರ್ಕಿಯ ಸ್ತ್ರೀಯರಿಗೆ ಕೊಡಲ್ಪಡುತ್ತಿರುವುದು ಸಿವಿಲ್ ಡಿಫೆನ್ಸದಲ್ಲಿ ಸಹ ಕೆಲಸ ಮಾಡಲು ತುರ್ಕಿಯ ಸ್ತ್ರೀಯರಿಗೆ ಸರಿಸಮಾನವಾದ ಹಕ್ಕಿರುವುದು. ಟರ್ಕಿಯ ಯುದ್ಧದಲ್ಲಿ ಇಳಿದರೆ ಗಲ್ಲಿ ಸ್ತ್ರೀಯರು ಸಹ ಬಂದೂಕಗಳನ್ನು ಹೊತ್ತುಕೊಂಡು ಯುದ್ಧರಂಗವನ್ನು ಪ್ರವೇಶಿಸುವರು ಒಂದೇ 20 ವರ್ಷದಲ್ಲಿ ಅಲ್ಲಿಯ ಸ್ತ್ರೀಯರು ಫೋಷಾದಿಂದ ಯುದ್ಧರಂಗಕ್ಕೆ ಮಾರ್ಪಟ್ಟಿರುವರು ಆಶ್ಚರ್ಯವಲ್ಲವೇ ?

ವರ್ತಮಾನ

ವಾಷಿಂಗ್ಟನ್ ಸಮ್ಮೇಳನದಲ್ಲಿ ಜನರಲ್ ಡೇವಿಸ್‌ರವರು ಯೂರೋಪ್ ದಂಡಯಾತ್ರೆಗೆ ಏನೇರಿಕನ್ನರು ಸಿದ್ಧರಾಗಿರುತ್ತಾರೆಂದೂ ಅದರ ಯಾವಾಗ ಏನ್ನುವುದು ಮುಂದಾಲೋಚನೆಯನ್ನು ಇಟ್ಟಕೊಂಡೇ ಮಾಡತ್ತೇನೆಂದು ಹೇಳಿದರು.

ಭಾರತದ ರಾಜಕೀಯ ಬೈದಿಗಳು

ಲಂಡನ್ನಿನಲ್ಲಿನ ಕೊಸ ನರ್ತಮಾನದಂತೆ, ನೈಸರಾಯಿ ಸದನಿಯು ಸರ್ ಸಾಮ್ಯುಲ್ ಹೋರ್, ಇಲ್ಲದಿದ್ದರೆ ಸರ್ ಆರ್ಕಿಬಲ್ಡ್ ಕ್ಲಾರ್ಕ್ ರವರಿಗೆ ಸಿಕ್ಕುವುದಾಗಿದೆ.

ಬ್ರಿಟಿಷ್ ಉತ್ಪತ್ತಿ ಮಂತ್ರಿ ಆಲಿವರ್ ಲಿಟಲ್‌ಟನ್ನರು ಬಹುಶಃ ಮೆಡಿಟರೇನಿಯನ್ನಿನಲ್ಲಿ ಎರಡನೇ ರಂಗವು ಆರಂಭವಾಗಬಹುದೆಂದು ಹೇಳಿರುವರು.

ನಾರ್ವೆಯಲ್ಲಿದ್ದ 4000 ಹೆಣ್ಣು ಮಕ್ಕಳನ್ನು ಕೆಲಸಕ್ಕೆ ಬಲಾತ್ಕಾರವಾಗಿ ಕರೆದುಕೊಂಡು ಹೋಗಿರುವರು.

ಒರಿಸ್ಸಾದಲ್ಲಿ ಕ್ಷಾಮವು ಅಧಿಕವಾಗಿದೆ. ಹುಲ್ಲು ಪತ್ರ ಎಲೆಗಳನ್ನು ಕೂಡಾ ತಿಂದು ಜನರು ಜೀವಧಾರಣೆಯನ್ನು ಮಾಡಿಕೊಳ್ಳುತ್ತಿರುವರು. ಅಲ್ಲಿಯ ಸರಕಾರವೂ ಜನರಿಗೆ ಹೆಚ್ಚು ಕುಮ್ಮಕ್ಕು ಮಾಡುತ್ತಲಿರುವುದು.

ಇಂಗ್ಲೆಂಡಿನಲ್ಲಿ ರೇಷನಿಂಗ್ ಕೇಸದಲ್ಲಿ ನುರಿತ ಮಿಸ್ ಡಬ್ಬುಯು. ಹೆಚ್, ಪರ್ಬಿಯವರನ್ನು ಭಾರತ ಸರಕಾರದವರು ರೇಷನಿಂಗ್ ಅಡ್ವೈಜರ್‌ರಾಗಿ ನೇಮಕ ಮಾಡಿರುತ್ತಾರೆ.

ಸಿಂಹಳದ ಶಾಸನ ಸಭಾ ಸದಸ್ಯರು ಲಂಚಾ ತೆಗೆದುಕೊಳ್ಳುತ್ತಿದ್ದರೆಂದು ಎಂಟು ಮಂದಿಯ ಮೇಲೆ ಆಪಾದನೆಗಳು ಸ್ಥಿರವಾದವು. ಇವರಲ್ಲಿ ಮೂವರು ಐರೋಪ್ಯರು.

ಯುದ್ಧವು ಬಹಳ ದಿವಸ ನಡೆಯುವುದು, ಬೇಗನೇ ಮುಗಿಯುವ ಹಾಗಿಲ್ಲ ಎಂದು ಮಿ || ಚರ್ಚಿಲ್ಲರು ವಾಷಿಂಗ್ಟನ್ನಿನಲ್ಲಿ ಹೇಳಿರುವರು.

ಜಪಾನೀಯರು ಪೆರಲ್ ಹಾರ್ಬರಿನಲ್ಲಿ 22 ಹಡಗುಗಳನ್ನು ಮುಳುಗಿಸಿದ್ದರಷ್ಟೆ. ಈಗ ಅಮೇರಿಕಾದವರು ಅವುಗಳಲ್ಲಿ 7 ಯುದ್ಧ ನೌಕೆಯನ್ನು ನೀರಿನ ಮೇಲಕ್ಕೆ ಎತ್ತಿರುವರು,

ಡರ್ಬಾನ್‌ದಲ್ಲಿ ಭಾರತೀಯರಿಗೆ ಸೈಟುಗಳನ್ನು ಕೊಡಲು ಏಜಾರಣ್ಣಾ ಸಮಿತಿಗೆ ನೇಮಕವಾಗಿರುವುದು.

ಬಟ್ಟೆಬರೆಗಳಿಗೆ ಅಸಾಧ್ಯ ಧಾರಣೆ

ಬಟ್ಟೆ ಬರೆಗಳ ದರಗಳು ಒಂದಕ್ಕೆ ಐದುಪಾಲು ಹೆಚ್ಚಿವೆ. ಅಶನಕ್ಕೆ ಎರಡನೇಯದಾಗಿ ವಸನವಿದೆ. ಬಟ್ಟೆ ಬರೆಗಳು ಧನಿಕರಿಗೂ ಬೇಕು, ಬಡವರಿಗೂ ಬೇಕು. ಸಾಮಾನ್ಯ ತರಗತಿಯ ಪ್ರಜೆಯ ಜೀವನವು ಕಷ್ಟತಮವಾಗಿದೆ. ಈ ಯುದ್ಧವು ತಂದ ಮಹಾ ಕಷ್ಟಗಳಲ್ಲಿ ಬಟ್ಟೆಯ ಕೊರತೆ ಅಸಾಧ್ಯ ಧಾರಣೆ ಇವು ಸಹನಾತೀತ ಇವೆ. ಬೊಂಬಾಯಿಯ ಗಿರಣಿ ಮೂಲಕ ಸಂಘವವರು ಹೊರಡಿಸಿದ ವರದಿಯಂತೆಯೇ ಇಲ್ಲಿ ತಯಾರಾಗುವ ಬಟ್ಟೆಗಳ ಧಾರಣೆಗಳ ವಿವರ ಹೀಗಿದೆ—

	18-8-1939	13-3-1942	12-3-1943
ಲಾಂಗ್ ಕ್ಲಾತ್	0—8—6	1—2—10	2—4—6
ಶರ್ಟಿಂಗ್	0—8—5	1—1—9	2—6—3
ಲೆವ್ಸಾರ್ಡ್ ಕ್ಲಾತ್	0—8—2	1—2—1	2—5—0
ಧೋತಿ	0—9—6	1—2—0	2—10—0
ಛದ್ದರ್	0—8—9	1—3—2	2—9—3
ಡ್ರಿಲ್	0—7—6	1—1—0	2—5—0

(ಈ ದರಗಳು ಒಂದು ರಾತ್ತಿನವು)

ಭಾರತವು ಬೀಗದ ಕೈ ಜಪಾನನ್ನು ಗೆಲ್ಲಲು!

ಜಪಾನ್ ಗೆಲ್ಲಲು ಭಾರತವೇ ಬೀಗದ ಕೈ ಎಂದು ಅಮೇರಿಕಾದ ವಾಷಿಂಗ್‌ಟನ್ ಪೋಸ್ಟ್ ಹೇಳುವುದು

ಬ್ರಿಟಿಷ್ ವಿಮಾನಧಾಳಿ ದಿನೇದಿನೇ ಹೆಚ್ಚುತ್ತಿರುವುದರಿಂದ ಜರ್ಮನ್ ಪ್ರಜೆಗಳಿಗೆ ಜಾಗರೂಕತೆಯಾಗಿರಬೇಕೆಂದು ಎಚ್ಚರಿಕೆ ಕೊಟ್ಟಿರುವರು.

ಇಟಲಿಯು ಮೇಲೆ ಮಿತ್ರಪಕ್ಷದವರು ದಂಡಯಾತ್ರೆ ಮಾಡಿದರೆ ಇಟಲಿ ಜರ್ಮನಿ ಒಂದಕ್ಕೊಂದು ಒಟ್ಟಿನಿಂದ ಎದುರಿಸುವುದಾಗಿ ಇಟಲಿ ಜರ್ಮನಿಯ ಮೈತ್ರಿಯಂಟಾದ 4 ನೇ ವಾರ್ಷಿಕೋತ್ಸವದಲ್ಲಿ ಠರಾವು ಮತ್ತೆ ಮಾಡಿದವು.

ಲೇಟ್ ಅಲ್ಲಾ ಒಕ್ಕಲಿಗರವರನ್ನು ಹೊಸಮಾಡಿದವರನ್ನು ಪತ್ತೆಮಾಡಿಕೊಟ್ಟರೆ 10 ಸಾವಿರ ರೂಪಾಯಿ ಬಹುಮಾನವನ್ನು ಸರ್ಕಾರದವರು ಕೊಡುತ್ತೇವೆಂದೂ ಪ್ರಕಟಣೆ ಮಾಡಿರುವರು.

ಫ್ರಾನ್ಸ್‌ನಲ್ಲಿರುವ ಎಲ್ಲಾ ಯುವಕರು 18 ರಿಂದ 21 ವರ್ಷದ ವಯಸ್ಸುಳ್ಳವರೆಲ್ಲರೂ ಜರ್ಮನಿಗೆ ಕೆಲಸಕ್ಕೆ ಒರಲು ಸಿದ್ಧರಾಗಬೇಕೆಂದು ಹಿಟ್ಲರನ ಆಜ್ಞೆಯಾಗಿದೆ

ಕ್ಯಾಲಿಕಟ್‌ನಲ್ಲಿ ಅಕ್ಕಿಯ ದರವನ್ನು ಸೇರಿಗೆ 1—8—0 ಹೆಚ್ಚಿಸಿರುವರು.

ಟ್ಯುನಿಷಿಯಾ ಯುದ್ಧದಲ್ಲಿ ಗ್ರೀಸ್ ನೌಕೆಗಳು ಸಹಾ ಮಿತ್ರ ಪಕ್ಷದವರಿಗೆ ಸಹಾಯ ಮಾಡುವುವು.

ಕುಡಿಯುವ ನೀರಿಗೆ ಬರವೇ?

ಚಿತ್ರೂರಿನಲ್ಲಿ ಎರಡು ತಿಂಗಳುಗಳಿಂದ ಆಹಾರ ಸಾಮಗ್ರಿಗಳ ದೊರೆಯುವಿಕೆಯು ಹಾಗಿರಲಿ, ನೀರಿನ ತೊಂದರೆ ಬಹಳ ಹೆಚ್ಚಾಗಿದೆ. ಅಲ್ಲಿಯ ಭಾವಿಗಳೆಲ್ಲಾ ಒಣಗಿ ಹೋಗಿವೆ. ಜನರ ಹಾಹಾಕಾರವು ಹೆಚ್ಚಾಗಿದೆ.

ರೂಹರ್ ಪ್ರಾಂತ್ಯದಲ್ಲಿ ಜರ್ಮನ್ ಪ್ರಜೆಗಳು ಗಾಬರಿಯಾಗಿರುವರು ಅಲ್ಲಿ ಈಚಿಗೆ ಬ್ರಿಟಿಷರು ಎರಡು ಆಣೆಕಟ್ಟನ್ನು ಒಡೆದದ್ದರಿಂದ ವಿಶೇಷ ನಷ್ಟವಾಯಿತಲ್ಲವೆ? ಹೆಚ್ ಹಿಮ್ಲರ್‌ಗೆ ವಿಶೇಷ ಅಧಿಕಾರ ಕೊಟ್ಟಿರುವರು. ಈ ಗಲಭೆಯನ್ನು ತಗ್ಗಿಸುವುದಕ್ಕೋಸ್ಕರ ಈ ಅಧಿಕಾರಕ್ಕೆ ಹಿಟ್ಲರ್‌ನ ಅನುಮತಿ ಸಹಾ ದೊರಕಿತು.

ದೇಶಾಭಿಮಾನ ಸ್ವಾಭಿಮಾನ

ಇವುಗಳಿಂದಾಗಿ ದೃಷ್ಟಿಯಿಂದಲೂ ವೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯು

ಪ್ರಜೆಗಳ ಶಾಖೆಯೇ ಅತ್ಯುತ್ತಮ ಸಂಸ್ಥೆ!

ವಿಮೆಯ ಸೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿಸೂಡಲಾಗುವದು.

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯವುಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂ. ಗಳಂತೆ ಬೋನಸ್ ಹಂಚಿಕೆ

ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ
ಬೆಂಗಳೂರು.

ಉತ್ಕೃಷ್ಟವಾದ ಹಿಂಗು

ರಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು

TG. ಮಾರ್ಕಿನ ಹಿಂಗನ್ನು
ಉಪಯೋಗಿಸಿ.

ಇದನ್ನು ನೀವು ಒಂದುಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

ಮೈಸೂರು ವೈಶ್ಯಪತ್ರಿಕೆ
ಉತ್ತಮ ಸಚಿತ್ರ ಕನ್ನಡ ತೆಲಗು
ಮಾಸಪತ್ರಿಕೆಗೆ
ಚಂದಾದಾರರಾಗಿರಿ
ಈಗಗ್ಗೆವಾರ್ಷಿಕ ಚಂದಾ ರೂ. ೫—೦—೦
ಜಡಿ ಪ್ರತಿ 4 ಆಣೆ.
ಹಿಂದಾಥಮ್ಸ್ ಟೈಪ್ರೈಟಿಂಗ್ ಬ್ಯಾಂಕ್‌ಸ್ಟಾಲ್
ಸಲ್ಲಯಿಸಿ ಪತ್ರಿಕೆಯು ತಿಳಿಸಲ್ಪಡುತ್ತೆ.
ಕಾರ್ಯಾಲಯ:
ಶ್ರೀ ವಾಸವಾಂಬಾಭವನ
ಅಶೋಕ ರಸ್ತೆ — ಮೈಸೂರು

Edited, Printed & published by M. S. Krishna Rao, at the Satyavadi Press. Chamaraja Agrahar, Mysore

ಅಕ್ಕರ

ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು

For All Kinds of
Printing & Binding

The Satyavadi Press

ರಣಜಿತ್ ಟಾಕೀಸ್ RANJIT — UJALA

ಸೌಂದರ್ಯ ಸೊಬಗಿನ - ತಾರೆ **ನಾಸೀಮ್**
ಮತ್ತು ನಟಶ್ರೇಷ್ಠ **ಪೃಥ್ವೀರಾಜ್**
ಪಾತ್ರವಹಿಸಿರುವ

2 ನೇ ವಾರ

ಉಜಾಲ

ಸಹಾಯಕನಟರು— **ರತ್ನಬಾಯಿ, ವಿಷ್ಣುಮುಷ್ರಾಫ್ ಮುಬಾರಕ್ ಮುಂತಾದವರು**

ರಸಾಯನ ರಾಜ

ಸಿನಿಫಿಲ್ಮ್

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣಂರವ್, ಕೆ. ಎಂ. ಮಹದೇವನ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.

ನಿರ್ದೇಶಕರು— ಜಿ. ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ

ಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ

ಸ್ಟೂಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

ಸತ್ಯವಾದಿ ಪತ್ರಿಕೆಗೆ

ಚಂದಾದಾರರಾಗಿರಿ

ತಿಂಗಳಿಗೆ ೦—೬—೦